**ರಾಜ್ಯದ ಕೆರೆಗಳನ್ನು ವೀಕ್ಷಿಸಿದರೆ ಜಲಕ್ಷಾಮದ ಕಾರಣದ ಜೊತೆಗೆ ಕಳೆ ಗಿಡಗಳ ಜನಪದ ಜಗತ್ತು ಕಾಣಿಸುತ್ತದೆ. ತುಂಬಿದ ಕೆರೆಯ ಚೆಂದದ ಕಮಲ ಪುಷ್ಪಗಳಿಂದ ಶುರುವಾಗಿ ಬತ್ತಿದ ಕೆರೆಯಲ್ಲಿ ಜಾಲಿ, ಲಂಟಾನಾಗಳು ಕಂಟಿಗಳಿವೆ. ರಾಜ್ಯದ ನೂರಾರು ಕೆರೆಗಳ ಸಂದರ್ಶನದ ಭಾಗವಾಗಿ, 'ಕೆರೆ ಪಯಣದ ಕಳೆ ಕಥಾನಕ' ಇಲ್ಲಿದೆ. ಇದು ನಾಡಿನ ಜಲಮೂಲಗಳಿಗೆ ಹಿಡಿದಿರುವ ಕನ್ನಡಿಯೂ ಹೌದು.**

■ ಶಿವಾನಂದ ಕಳವೆ



# ಕೆರೆಗಳನ್ನು ಓದುವುದು ಹೇಗೆ?

ಹುಬ್ಬಳ್ಳಿಯ ಉಣಕಲ್ ಕೆರೆಗೆ ಕಳೆಗಳ ವಿಚಾರದಲ್ಲಿ ಖ್ಯಾತಿಯಿದೆ. ಅಂತರಗಂಗೆ ಎಂಬ ತೇಲು ಸಸ್ಯಗಳು ಇಡೀ ಕೆರೆ ಕಬಳಿಸಿದೆ, ಒಮ್ಮೆ ಸ್ವಚ್ಛವಾಯಿತೆಂದು ಕಣ್ಣರಳಿಸುವ ಹೊತ್ತಿಗೆ ಮತ್ತೆ ಮರುಹುಟ್ಟು ಪಡೆದು ಮೂಗುಮುರಿಯುವ ಪರಿಸ್ಥಿತಿ ಉದ್ಭವಿಸುತ್ತದೆ. ನಗರಾಡಳಿತ ಕಳೆ ತೆಗೆಯಲು ಹಣ ಖರ್ಚುಮಾಡುತ್ತಲೇ ದಶಕಗಳು ಕಳೆದಿವೆ. ನಗರದ ಕೊಳಚೆಯಲ್ಲಿನ ಡಿಟರ್ಜೆಂಟ್ ಸೇರಿದಂತೆ ವಿವಿಧ ಕಲ್ಮಶಗಳು ನೀರಿಗೆ ನುಸುಳಿರುವುದರಿಂದ ಅತ್ಯಂತ ಸಮೃದ್ಧವಾಗಿ ಕಳೆ ಕೆರೆಯ ಸೌಂದರ್ಯ ನುಂಗಿದೆ. ಸಂಪೂರ್ಣ ಕಳೆಯನ್ನು ಬಾಚಿ ತೆಗೆದಾಯ್ತೆಂದು ಕಣ್ತೆರೆಯುವಷ್ಟರಲ್ಲಿ ಮತ್ತ್ಯಾವುದೋ ಮೂಲೆಯಿಂದ ರಕ್ತಬೀಜಾಸುರ ಸಂತಾನ ಬೆಳೆಯುತ್ತದೆ. ಜಲಶುದ್ಧೀಕರಣದಲ್ಲಿ ಸಸ್ಯ ಪ್ರಮುಖವಾಗಿದ್ದರೂ ದಂಟು, ಎಲೆಗಳು ಕೊಳೆಯುತ್ತ ಹಿಗ್ಗಿ ಬೆಳೆಯುತ್ತಿವೆ. ಹೂಳು ತೆಗೆಯುವ ನಾಟಕಗಳಂತೆ ದೈತ್ಯ ಕಳೆ ತೆಗೆಯುವುದು ನುಂಗಣ್ಣರ ಹೊಸ ಬೆಳೆಯಾಗಿದೆ.

ಶಿರಸಿಯಿಂದ ರಾಯಚೂರಿಗೆ ರಾಜ್ಯದ ಕೆರೆ ವೀಕ್ಷಣೆ ಮೊದಲ ಯಾತ್ರೆ ಶುರುವಾಗಿತ್ತು. ಹಾನಗಲ್ ಸನಿಹದಲ್ಲಿ ಕೆರೆಯ ಗಿಡವೊಂದು ಚೆಂದದ ಹೂವರಳಿಸಿತ್ತು. ಚಿತ್ರ ತೆಗೆಯುತ್ತಿದ್ದಾಗ ಕಾರಿನ ಚಾಲಕ ನನಗಿಂತ ಮುಂದಡಿಯಿಟ್ಟು ಸಣ್ಣ ಗಿಡ ಕಿತ್ತು ಅಕ್ಕರೆಯಿಂದ ಪುಟ್ಟ ನೀರಿನ ಬಾಟಲಿಯಲ್ಲಿಟ್ಟು ಜೋಪಾನ ಮಾಡಿದ. ಕಾರು ನಿಲ್ಲಿಸಿದಾಗೆಲ್ಲ ಗಿಡದ ಯೋಗಕ್ಷೇಮ ನೋಡುತ್ತಿದ್ದ.